ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
**KARNATAKA STATE FINANCIAL CORPORATION**
Established under the State Financial Corporations' Act, 1951

भारतीय मानक ब्यूरो IS / ISO 9001:2008
मानक: पथप्रदर्शक: Bureau of Indian Standards QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ ಸಿಬ್ಬಂದಿ - 1293 | 2018-19
Ref. No. KSFC/H.O./

ದಿನಾಂಕ : 16.01.2019
Date

**ಸುತ್ತೋಲೆ**

ವಿಷಯ: ಹೊರಗುತ್ತಿಗೆ ಮೇಲೆ ಸಿಬ್ಬಂದಿಯನ್ನು ನೇಮಿಸುವ ಬಗ್ಗೆ.
ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ.ಆಇ 3 ಟಿಎಫ್ ಪಿ 2018, 14.05.2018.

----------

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ.ಆಇ 3 ಟಿಎಫ್ ಪಿ 2018, ದಿನಾಂಕ 14.05.2018 ರಲ್ಲಿ ಹೊರಗುತ್ತಿಗೆಯ ಮೇಲೆ ಮಾನವಸಂಪನ್ಮೂಲ ತೆಗೆದುಕೊಳ್ಳಲು ಪ್ರತ್ಯಾಯೋಜಿಸಿರುವ ಪೂರ್ಣ ಅಧಿಕಾರವನ್ನು ಹಿಂಪಡೆಯಲಾಗಿದೆ. ಇದಲ್ಲದೆ ಇನ್ನು ಮುಂದೆ ಯಾವುದೇ ಇಲಾಖೆಗಳಲ್ಲಿ ಬೆರಳಚ್ಚುಗಾರರು/ಚಾಲಕರು/ಸೇವಕರ ಖಾಲಿ ಹುದ್ದೆಗಳಿಗೆ ಹೊರಗುತ್ತಿಗೆಯ ಮೇಲೆ ನೇಮಿಸಿಕೊಳ್ಳುವ ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳನ್ನು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆ ಸಲ್ಲಿಸಿ ಕಡ್ಡಾಯವಾಗಿ ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕೆಂದು ಆದೇಶಿಸಲಾಗಿದೆ.

ಸಂಸ್ಥೆಯಲ್ಲಿಯೂ ಸಹ ಕೆಲವು ವಿಶೇಷ ಸಂದರ್ಭಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವಕರು, ಚಾಲಕರು ಹಾಗೂ ಬೆರಳಚ್ಚುಗಾರರನ್ನು ಪ್ರತ್ಯಾಜಿಸಲಾಗಿದೆ. ಸಂಸ್ಥೆಯಲ್ಲಿ ಈಗಾಗಲೇ ಹೆಚ್ಚುವರಿ ಉದ್ಯೋಗಿಗಳು ಇರುವುದರಿಂದ ಸಂಸ್ಥೆಯಲ್ಲಿ ಇನ್ನು ಮುಂದೆ ಸೇವಕರು, ಚಾಲಕರು ಮತ್ತು ಬೆರಳಚ್ಚುಗಾರರ ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವಸಂಪನ್ಮೂಲವನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಲಾಗುವುದು. ಶಾಖಾ / ವಿಭಾಗದ ಮುಖ್ಯಸ್ಥರುಗಳು ಇನ್ನು ಮುಂದೆ ಹೊರಗುತ್ತಿಗೆ ಆಧಾರದ ಮೇಲೆ ಪ್ರತ್ಯಾಯೋಜಿಸಿರುವ ಪ್ರಸ್ತಾವನೆಯನ್ನು ಸಿಬ್ಬಂದಿ ವಿಭಾಗಕ್ಕೆ ಕಳುಹಿಸಿಕೊಡಬಾರದು ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಕರ್ನಾಟಕ ಸರ್ಕಾರದ ಆದೇಶದನ್ವಯ ಪ್ರತ್ಯಾಯೋಜಿಸುವ ಪ್ರಸ್ತಾವನೆಯನ್ನು ಸಂಸ್ಥೆಯಲ್ಲಿಯೂ ಸಹ ಹಿಂಪಡೆಯಲಾಗಿದೆ. ಶಾಖೆ / ವಿಭಾಗಗಳಲ್ಲಿ ಇರುವ ಮಾನವಸಂಪನ್ಮೂಲಗಳಲ್ಲಿಯೇ ಕಾರ್ಯನಿರ್ವಹಿಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಹೆಚ್ಚುವರಿ ಉದ್ಯೋಗಿಗಳ ನಿಯೋಜಿಸುವ ಪ್ರಸ್ತಾವನೆಯನ್ನು ಸಾರ್ವತ್ರಿಕ ವರ್ಗಾವಣೆ 2019ರವರೆಗೆ ಪುರಸ್ಕರಿಸುವುದಿಲ್ಲ.

**ಕಾರ್ಯನಿರ್ವಾಹಕ ನಿರ್ದೇಶಕರು-2**

ಗೆ:
ಎಲ್ಲಾ ಶಾಖಾ / ಆ.ಲೆ.ಪ ಕೋಶಗಳ ಮುಖ್ಯಸ್ಥರುಗಳಿಗೆ
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ }
ಕಾರ್ಯ ನಿರ್ವಾಹಕ ನಿರ್ದೇಶಕರು-1 ರವರ ಮಾಹಿತಿಗಾಗಿ

ವ್ಯ.ನಿ. ರವರ ಕಛೇರಿಗೆ } ಮಾಹಿತಿಗಾಗಿ

ಅಧ್ಯಕ್ಷರು, ಕರಾಹಸಂ ನೌಕರರ /ಅಧಿಕಾರಿಗಳ / ಪ.ಜಾ & ಪ.ಪಂ ನೌಕರರ ಸಂಘ, ಪ್ರಧಾನ ಕಛೇರಿ.
ಗ್ರಂಥಾಲಯ / ಸೂಚನಾ ಫಲಕಕ್ಕೆ
ಕಛೇರಿ ಪ್ರತಿ.

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು - 560 052
ದೂರವಾಣಿ ಸಂಖ್ಯೆ ಸಾಮಾನ್ಯ: 22263322 ಫ್ಯಾಕ್ಸ್: 080-22250126 ಇ-ಮೇಲ್ : info@ksfc.in ವೆಬ್ : www.ksfc.in
**HEAD OFFICE :** KSFC Bhavan, No. 1/1, Thimmaiah Road, Near Cantonment Railway Station, Bengaluru - 560 052